ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	657
ಸದಸ್ಯರ ಹೆಸರು	:	ಶ್ರೀ ಎನ್.ರವಿಕುಮಾರ್
ಉತ್ತರಿಸುವ ದಿನಾಂಕ	:	17.09.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ಕೊಳವೆ ಬಾವಿ ಕೊರೆಸಿ ಕೊಡಲಾಗುವುದು ಎಂದು ಮೋಸ ಮಾಡುವ ಮೂಲಕ 4.5 ಕೋಟಿಗಿಂತಲೂ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ
ಆ)	ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಕಳೆದ ಎರಡು ಆರ್ಥಿಕ ವರ್ಷಗಳ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಷ್ಟು ಕೊಳವೆ ಬಾವಿಯನ್ನು ಕೊರೆಸಲಾಗಿದೆ; ಒಂದು ಕೊಳವೆ ಬಾವಿಗೆ ತಗಲುವ ವೆಚ್ಚ ಎಷ್ಟು; (ವಿವರದೊಂದಿಗೆ ಮಾಹಿತಿ ನೀಡುವುದು)	**ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ:** ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಗುಬ್ಬಿ ವಿಧಾನ ಸಭಾ ಕ್ಷೇತ್ರದಲ್ಲಿ ಹಿಂದಿನ ಸಾಲಿನ ಗುರಿಯ ಕೊಳವೆಬಾವಿಗಳು ಒಳಗೊಂಡಂತೆ ಒಟ್ಟು 20 ಕೊಳವೆಬಾವಿಗಳನ್ನು ಕೊರೆಸಲಾಗಿದೆ. ವಿವರ ಇಂತಿದೆ: ಕ್ರ.ಸಂ. / ವರ್ಷ / ಕೊರೆಸಲಾದ ಕೊಳವೆಬಾವಿಗಳ ಸಂಖ್ಯೆ 01 / 2019-20 / 0 02 / 2020-21 / 20 ಒಟ್ಟು / 20 **ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ:** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಪಂಗಡದವರಿಗೆ ಕೊಳವೆಬಾವಿಗಳನ್ನು ಕೊರೆದಿರುವುದಿಲ್ಲ. **ಪ್ರತಿ ಕೊಳವೆಬಾವಿಗೆ ರೂ 4.50 ಲಕ್ಷಗಳ ಘಟಕ ವೆಚ್ಚ ನಿಗದಿಪಡಿಸಲಾಗಿದೆ. ಇದರಲ್ಲಿ ರೂ. 4.00 ಲಕ್ಷಗಳ ಸಹಾಯಧನ ಇದ್ದು, ಈ ಪೈಕಿ ರೂ. 0.50 ಲಕ್ಷಗಳನ್ನು ವಿದ್ಯುದ್ದೀಕರಣ ಸಲುವಾಗಿ ಎಸ್ಕಾಂಗಳಿಗೆ ಪಾವತಿಸಲಾಗುವುದು. ಹಾಗೂ ರೂ. 0.50 ಲಕ್ಷಗಳ ಅವಧಿಸಾಲ ಇರುತ್ತದೆ.**

ಇ)	ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೊಳವೆ ಬಾವಿ ಕೊರೆಸುವ ಕಾರ್ಯಾದೇಶವನ್ನು ಬಡವರಿಗೆ ತೋರಿಸಿ ಪ್ರತಿಯೋರ್ವ ಫಲಾನುಭವಿಯಿಂದ 1 ಲಕ್ಷದ 50 ಸಾವಿರ ಪಡೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಫಲಾನುಭವಿಯಿಂದ ಸರ್ಕಾರ ಎಷ್ಟು ಮೊತ್ತವನ್ನು ಪಡೆದುಕೊಳ್ಳುತ್ತದೆ? (ಒದಗಿಸುವುದು)	ಬಂದಿಲ್ಲ. ಈ ಯೋಜನೆಯು ಸರ್ಕಾರದ ಒಂದು ಪ್ರತಿಷ್ಠಿತ ಉಚಿತ ಯೋಜನೆಯಾಗಿರುತ್ತದೆ. ಫಲಾಪೇಕ್ಷಿಗಳು ಸೌಲಭ್ಯವನ್ನು ಪಡೆಯಲು ಯಾವುದೇ ರೀತಿಯ ಹಣ ಪಾವತಿಸುವ ಅವಶ್ಯಕತೆ ಇರುವುದಿಲ್ಲ.

ಸಂಖ್ಯೆ: ಸಕಇ 432 ಎಸ್‌ಡಿಸಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.